ಕರ್ನಾಟಕ ಸರ್ಕಾರ

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ,

## 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003

ಸಂಖ್ಯೆ:ಕಶಾಪ&ಮೌ.ನಿ.ಮಂ/ಪಿಯು1/ಖಾ.ಅ.ನೋ/2025-26 ದಿನಾಂಕ: 15-10-2025

## ಸು ತ್ತೋ ಲೆ

ವಿಷಯ: ಫೆಬ್ರುವರಿ/ಮಾರ್ಚ್ 2026 ರಲ್ಲಿ ನಡೆಸಲಾಗುವ ದ್ವಿತೀಯ ಪಿಯುಸಿ ಪರೀಕ್ಷೆ-1ಕ್ಕೆ ಖಾಸಗಿ ಅಭ್ಯರ್ಥಿಗಳಾಗಿ ನೋಂದಾಯಿಸಿಕೊಳ್ಳುವ ಕುರಿತು.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ ಇಡಿ.242.ಟಿಪಿಯು.81 ದಿನಾಂಕ:02-11-1981.

2. ಸರ್ಕಾರದ ಆದೇಶ ಸಂಖ್ಯೆ ಇಡಿ. 125.ಟಿಪಿಯು.90 ದಿನಾಂಕ:03-07-1992.
3. ಸರ್ಕಾರದ ಆದೇಶ ಸಂಖ್ಯೆ ಇಡಿ. 159.ಟಿಪಿಯು.96 ದಿನಾಂಕ:20-09-1996.
4. ಸರ್ಕಾರದ ಆದೇಶ ಸಂಖ್ಯೆ ಇಡಿ. 09.ಟಿಪಿಯು.2005 ದಿನಾಂಕ:31-05-2005.
5. ಸರ್ಕಾರದ ಆದೇಶ ಸಂಖ್ಯೆ ಇಡಿ. 195.ಡಿಜಿಡಿ.2017 ದಿನಾಂಕ:20-03-2018.
6. ಸರ್ಕಾರದ ಆದೇಶ ಸಂಖ್ಯೆ ಇಪಿ. 203 ಎಸ್‌ಎಲ್‌ಬಿ 2023 ದಿನಾಂಕ:21-09-2023.

---

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ ವತಿಯಿಂದ ನಡೆಸುತ್ತಿರುವ ಫೆಬ್ರುವರಿ/ಮಾರ್ಚ್ 2026 ರ ದ್ವಿತೀಯ ಪಿಯುಸಿ ಪರೀಕ್ಷೆ-1ಕ್ಕೆ ಉಲ್ಲೇಖಿತ ಸರ್ಕಾರದ ಆದೇಶಗಳನ್ವಯ ಪಿಯುಸಿ ಶಿಕ್ಷಣ ಬೋಧಿಸುವ ರಾಜ್ಯದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಮಾತ್ರ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಅದರಂತೆ 2026 ರ ದ್ವಿತೀಯ ಪಿಯುಸಿ ಪರೀಕ್ಷೆ-1ಕ್ಕೆ ಅರ್ಹ ಅಭ್ಯರ್ಥಿಗಳಿಂದ ದಿನಾಂಕ:**15-10-2025** ರಿಂದ ಖಾಸಗಿ ಅಭ್ಯರ್ಥಿಗಳಾಗಿ ನೋಂದಾಯಿಸಿಕೊಳ್ಳಲು **ONLINE ನಲ್ಲಿ ಮಾತ್ರ ಅರ್ಜಿ ಸಲ್ಲಿಸಲು** ಅವಕಾಶ ಕಲ್ಪಿಸಲಾಗಿದೆ. **ನೇರವಾಗಿ ಕಾಲೇಜಿನಲ್ಲಿ ನೋಂದಾಯಿಸಿಕೊಳ್ಳಲು ಅವಕಾಶವಿರುವುದಿಲ್ಲ.**

**ಖಾಸಗಿ ಅಭ್ಯರ್ಥಿಗಳಾಗಿ ನೋಂದಾಯಿಸಿಕೊಳ್ಳಲು ಕಡ್ಡಾಯವಾಗಿ ಇರಬೇಕಾದ ಅರ್ಹತೆಗಳು ಹಾಗೂ ಸೂಚನೆಗಳು:**

1. ದಿನಾಂಕ: 31-03-2026 ಕ್ಕೆ 17 ವರ್ಷಗಳು ತುಂಬಿರಬೇಕು. (31-03-2009 ರಂದು ಅಥವಾ ಅದಕ್ಕಿಂತ ಹಿಂದೆ ಜನಿಸಿರಬೇಕು. (ಉಲ್ಲೇಖ-4ರ ಆದೇಶದಂತೆ)
2. ಕರ್ನಾಟಕದಲ್ಲಿ ಎಸ್.ಎಸ್.ಎಲ್.ಸಿ/ ಸಿ.ಬಿ.ಎಸ್.ಇ/ ಐ.ಸಿ.ಎಸ್.ಇ/ ಎನ್.ಐ.ಓ.ಎಸ್.ಗಳಲ್ಲಿ ವ್ಯಾಸಂಗ ಮಾಡಿ 2025 ರ ಆಗಸ್ಟ್ ಅಥವಾ ಅದಕ್ಕೂ ಹಿಂದಿನ ವರ್ಷಗಳ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
3. ಇತರೆ ರಾಜ್ಯಗಳ ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ/10ನೇ ತರಗತಿ ಪರೀಕ್ಷೆ ತೆಗೆದುಕೊಂಡು, ಕನ್ನಡವನ್ನು ಒಂದು ಭಾಷೆಯನ್ನಾಗಿ ಅಥವಾ ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡಿ ತೇರ್ಗಡೆ ಹೊಂದಿರಬೇಕು ಹಾಗೂ 2025 ರ ಆಗಸ್ಟ್ ಅಥವಾ ಅದಕ್ಕೂ ಹಿಂದಿನ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಬೇಕು.
4. ಶಾಲಾ ಶಿಕ್ಷಣ ಇಲಾಖೆಯ (ಪದವಿ ಪೂರ್ವ) ದಾಖಲಾತಿ ಮಾರ್ಗಸೂಚಿ ಪಟ್ಟಿಯಲ್ಲಿರುವ ಸೆಕೆಂಡರಿ ಎಜುಕೇಷನ್ ಬೋರ್ಡ್‌ಗಳಿಂದ 2025 ರ ಆಗಸ್ಟ್ ಅಥವಾ ಅದಕ್ಕೂ ಹಿಂದಿನ ಸಾಲಿನ ಪರೀಕ್ಷೆಗಳಲ್ಲಿ 10ನೇ ತರಗತಿಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಅರ್ಹರಾಗಿರುತ್ತಾರೆ.
5. ಪ್ರಥಮ ಪಿಯುಸಿ ಅನುತ್ತೀರ್ಣರಾದವರು, ಪರೀಕ್ಷೆಗೆ ಹಾಜರಾಗದವರು, ವ್ಯಾಸಂಗವನ್ನು ಮುಂದುವರೆಸದವರು **(Discontinued)** ಅರ್ಹರಾಗಿರುತ್ತಾರೆ.

6. ಕರ್ನಾಟಕ ರಾಜ್ಯದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣಗೊಂಡು ಐ.ಟಿ.ಐ, ಜೆಓಸಿ, ಡಿಪ್ಲೊಮೊ ಇತ್ಯಾದಿ ತರಗತಿಗಳಿಗೆ ದಾಖಲಾಗಿ ಅನುತ್ತೀರ್ಣಗೊಂಡವರು, ಉತ್ತೀರ್ಣರಾದವರು ಹಾಗೂ ಅಲ್ಲಿ ವ್ಯಾಸಂಗ ಮುಂದುವರೆಸದವರು **(Discontinued)** ಅರ್ಹರಾಗಿರುತ್ತಾರೆ.

7. ದ್ವಿತೀಯ ಪಿಯಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು **ಅನುತ್ತೀರ್ಣರಾಗಿರುವ ಸಂಯೋಜನೆ ಹೊರತುಪಡಿಸಿ**, ಕಲಾ ಅಥವಾ ವಾಣಿಜ್ಯ ವಿಭಾಗದ ಬೇರೆ ಸಂಯೋಜನೆಯಲ್ಲಿ ನೋಂದಾಯಿಸಿಕೊಳ್ಳಬಹುದಾಗಿದೆ.

   ಉದಾಹರಣೆ: (1) ಅಭ್ಯರ್ಥಿಯು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಕಲಾ ವಿಭಾಗದ HESP ಸಂಯೋಜನೆಯಲ್ಲಿ ಅನುತ್ತೀರ್ಣಗೊಂಡಿದ್ದರೆ, HESP ಸಂಯೋಜನೆ ಬದಲು HEPG ಅಥವಾ HELP ಅಥವಾ HEPEd ಅಥವಾ HESEd ಅಥವಾ ವಾಣಿಜ್ಯ ವಿಭಾಗದ HEBA ಅಥವಾ EGBA ಅಥವಾ EBAB ಅಥವಾ BASB ಇತ್ಯಾದಿ ಸಂಯೋಜನೆಗೆ ನೋಂದಾಯಿಸಿಕೊಳ್ಳಬಹುದಾಗಿದೆ.

   (2) ಅಭ್ಯರ್ಥಿಯು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ವಾಣಿಜ್ಯ ವಿಭಾಗದ HEBA ಸಂಯೋಜನೆಯಲ್ಲಿ ಅನುತ್ತೀರ್ಣಗೊಂಡಿದ್ದರೆ, HEBA ಸಂಯೋಜನೆ ಬದಲು EGBA ಅಥವಾ EBAB ಅಥವಾ BASB ಅಥವಾ ಕಲಾ ವಿಭಾಗದ HESP ಅಥವಾ HEPG ಅಥವಾ HELP ಅಥವಾ HEPEd ಇತ್ಯಾದಿ ಸಂಯೋಜನೆಗೆ ನೋಂದಾಯಿಸಿಕೊಳ್ಳಬಹುದಾಗಿದೆ.

   (3) ಅಭ್ಯರ್ಥಿಯು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದ ಯಾವುದೇ ಸಂಯೋಜನೆಯಲ್ಲಿ ಅನುತ್ತೀರ್ಣಗೊಂಡಿದ್ದರೆ ಕಲಾ ವಿಭಾಗದ ಅಥವಾ ವಾಣಿಜ್ಯ ವಿಭಾಗದ ಈ ಕೆಳಗೆ ನಮೂದಿಸಿರುವ ಸಂಯೋಜನೆಗೆ ನೋಂದಾಯಿಸಿಕೊಳ್ಳಬಹುದಾಗಿದೆ.

8. ಖಾಸಗಿ ಅಭ್ಯರ್ಥಿಗಳು ಆಧಾರ್ ಕಾರ್ಡ್‌ನ ದೃಢೀಕೃತ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಲು ಸೂಚಿಸಿದೆ.

9. ದ್ವಿಪ್ರತಿ ವರ್ಗಾವಣೆ ಪತ್ರದ ಆಧಾರದ ಮೇಲೆ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಳ್ಳಲು ಬಂದಾಗ ಪ್ರಾಂಶುಪಾಲರು ತಮ್ಮ ಹಂತದಲ್ಲಿಯೇ ಪರಿಶೀಲಿಸಿ 100-00 ರೂಗಳ ಛಾಪಾ ಕಾಗದದಲ್ಲಿ ಮಂಡಲಿಯಿಂದ ಒದಗಿಸಿರುವ ನಿಗದಿತ ನಮೂನೆಯಲ್ಲಿ ಅಭ್ಯರ್ಥಿಯಿಂದ ದೃಢೀಕರಣ ಪಡೆಯುವುದು. (ದೃಢೀಕರಣ ಪತ್ರದ ಮಾದರಿಯನ್ನು ಸುತ್ತೋಲೆಯೊಂದಿಗೆ ಲಗತ್ತಿಸಿದೆ).

10. ಖಾಸಗಿ ಅಭ್ಯರ್ಥಿಗಳು ಕಲಾ ಅಥವಾ ವಾಣಿಜ್ಯ ಸಂಯೋಜನೆಯಲ್ಲಿ ಮಾತ್ರ ಭಾಗ-1 ರಲ್ಲಿ ಎರಡು ಭಾಷಾ ವಿಷಯಗಳನ್ನು ಹಾಗೂ ಭಾಗ-2 ರಲ್ಲಿ ನಾಲ್ಕು ಐಚ್ಛಿಕ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬೇಕು.

11. **ಸಾಮಾನ್ಯ ಪ್ರಶ್ನೆಗಳಿಗಾಗಿ: ಸಹಾಯವಾಣಿ ಸಂಖ್ಯೆ: 080- 23310075/76** ಅನ್ನು ಸಂಪರ್ಕಿಸಿ.

12. **ತಾಂತ್ರಿಕ ಸಹಾಯಕ್ಕಾಗಿ: ಸಹಾಯವಾಣಿ ಸಂಖ್ಯೆ: 9448772500, 9886082073, 9663657041** ಅನ್ನು ಸಂಪರ್ಕಿಸಿ.

## ಭಾಗ - 1/ PART - 1 (ಭಾಷಾ ವಿಷಯಗಳು/ LANGUAGE SUBJECTS)

| ಕ್ರ. ಸಂ | ಭಾಷಾ ವಿಷಯಗಳು | Language Subjects | ವಿಷಯ ಸಂಕೇತ/ Subject Code |
|---|---|---|---|
| 1 | ಕನ್ನಡ | Kannada | 01 |
| 2 | ಇಂಗ್ಲೀಷ್ | English | 02 |
| 3 | ಹಿಂದಿ | Hindi | 03 |
| 4 | ತಮಿಳು | Tamil | 04 |
| 5 | ತೆಲುಗು | Telugu | 05 |
| 6 | ಮಲಯಾಳಂ | Malayalam | 06 |
| 7 | ಮರಾಠಿ | Marathi | 07 |
| 8 | ಉರ್ದು | Urdu | 08 |
| 9 | ಸಂಸ್ಕೃತ | Sanskrit | 09 |
| 10 | ಅರೇಬಿಕ್ | Arabic | 11 |

## ಭಾಗ-2/ PART - 2 (ಐಚ್ಛಿಕ ವಿಷಯಗಳು/ OPTIONAL SUBJECTS)

(ಭಾಗ-2 ರಲ್ಲಿ ಈ ಕೆಳಗೆ ನೀಡಿರುವ ನಾಲ್ಕು ಐಚ್ಛಿಕ ವಿಷಯಗಳ ಒಂದು ಸಂಯೋಜನೆಯನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬೇಕು/ Select one of the following combinations of four subjects)

### ಕಲಾ ಸಂಯೋಜನೆಗಳು/ ARTS COMBINATIONS:

| ಕ್ರ.ಸಂ. | ವಿಷಯಗಳು ಹಾಗೂ ವಿಷಯ ಸಂಕೇತಗಳು | | | | | | | |
|---|---|---|---|---|---|---|---|---|
| 1 | ಇತಿಹಾಸ/ HISTORY | 21 | ಅರ್ಥಶಾಸ್ತ್ರ/ ECONOMICS | 22 | ಸಮಾಜಶಾಸ್ತ್ರ/ SOCIOLOGY | 28 | ರಾಜ್ಯಶಾಸ್ತ್ರ/ POLITICAL SCIENCE | 29 |
| 2 | ಇತಿಹಾಸ/ HISTORY | 21 | ಅರ್ಥಶಾಸ್ತ್ರ/ ECONOMICS | 22 | ಭೂಗೋಳಶಾಸ್ತ್ರ/ GEOGRAPHY | 24 | ರಾಜ್ಯಶಾಸ್ತ್ರ/ POLITICAL SCIENCE | 29 |
| 3 | ಇತಿಹಾಸ/ HISTORY | 21 | ಅರ್ಥಶಾಸ್ತ್ರ/ ECONOMICS | 22 | ತರ್ಕಶಾಸ್ತ್ರ/ LOGIC | 23 | ರಾಜ್ಯಶಾಸ್ತ್ರ/ POLITICAL SCIENCE | 29 |
| 4 | ಐಚ್ಛಿಕ ಕನ್ನಡ/ OPTIONAL KANNADA | 16 | ಇತಿಹಾಸ/ HISTORY | 21 | ಅರ್ಥಶಾಸ್ತ್ರ/ ECONOMICS | 22 | ರಾಜ್ಯಶಾಸ್ತ್ರ/ POLITICAL SCIENCE | 29 |
| 5 | ಇತಿಹಾಸ/ HISTORY | 21 | ಅರ್ಥಶಾಸ್ತ್ರ/ ECONOMICS | 22 | ರಾಜ್ಯಶಾಸ್ತ್ರ/ POLITICAL SCIENCE | 29 | ಶಿಕ್ಷಣ ಶಾಸ್ತ್ರ/ EDUCATION | 52 |
| 6 | ಇತಿಹಾಸ/ HISTORY | 21 | ಅರ್ಥಶಾಸ್ತ್ರ/ ECONOMICS | 22 | ಸಮಾಜಶಾಸ್ತ್ರ/ SOCIOLOGY | 28 | ಶಿಕ್ಷಣ ಶಾಸ್ತ್ರ/ EDUCATION | 52 |

## ವಾಣಿಜ್ಯ ಸಂಯೋಜನೆಗಳು/ COMMERCE COMBINATIONS:

| ಕ್ರ. ಸಂ | ವಿಷಯಗಳು ಹಾಗೂ ವಿಷಯ ಸಂಕೇತಗಳು | | | | | | | |
|---|---|---|---|---|---|---|---|---|
| 1 | ಇತಿಹಾಸ/ HISTORY | 21 | ಅರ್ಥಶಾಸ್ತ್ರ/ ECONOMICS | 22 | ವ್ಯವಹಾರ ಅಧ್ಯಯನ/ BUSINESS STUDIES | 27 | ಲೆಕ್ಕಶಾಸ್ತ್ರ/ ACCOUNTANCY | 30 |
| 2 | ಅರ್ಥಶಾಸ್ತ್ರ/ ECONOMICS | 22 | ಭೂಗೋಳಶಾಸ್ತ್ರ/ GEOGRAPHY | 24 | ವ್ಯವಹಾರ ಅಧ್ಯಯನ/ BUSINESS STUDIES | 27 | ಲೆಕ್ಕಶಾಸ್ತ್ರ/ ACCOUNTANCY | 30 |
| 3 | ಅರ್ಥಶಾಸ್ತ್ರ/ ECONOMICS | 22 | ವ್ಯವಹಾರ ಅಧ್ಯಯನ/ BUSINESS STUDIES | 27 | ಲೆಕ್ಕಶಾಸ್ತ್ರ/ ACCOUNTANCY | 30 | ಮೂಲಗಣಿತ/ BASIC MATHS | 75 |
| 4 | ವ್ಯವಹಾರ ಅಧ್ಯಯನ/ BUSINESS STUDIES | 27 | ಲೆಕ್ಕಶಾಸ್ತ್ರ/ ACCOUNTANCY | 30 | ಸಂಖ್ಯಾಶಾಸ್ತ್ರ/ STASTATICS | 31 | ಮೂಲಗಣಿತ/ BASIC MATHS | 75 |
| 5 | ಅರ್ಥಶಾಸ್ತ್ರ/ ECONOMICS | 22 | ವ್ಯವಹಾರ ಅಧ್ಯಯನ/ BUSINESS STUDIES | 27 | ಸಮಾಜಶಾಸ್ತ್ರ/ SOCIOLOGY | 28 | ಲೆಕ್ಕಶಾಸ್ತ್ರ/ ACCOUNTANCY | 30 |
| 6 | ಅರ್ಥಶಾಸ್ತ್ರ/ ECONOMICS | 22 | ವ್ಯವಹಾರ ಅಧ್ಯಯನ/ BUSINESS STUDIES | 27 | ರಾಜ್ಯಶಾಸ್ತ್ರ/ POLITICAL SCIENCE | 29 | ಲೆಕ್ಕಶಾಸ್ತ್ರ/ ACCOUNTANCY | 30 |

**ವಿಶೇಷ ಸೂಚನೆ:**

1. **2025-26ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ-1ಕ್ಕೆ ಹೊಸ (REGULAR) ಅಥವಾ ಪುನರಾವರ್ತಿತ (REPEATER) ಅಭ್ಯರ್ಥಿಗಳಾಗಿ ನೋಂದಾಯಿಸಿಕೊಂಡವರು, ಖಾಸಗಿ ಅಭ್ಯರ್ಥಿಗಳಾಗಿ ನೋಂದಾಯಿಸಿಕೊಳ್ಳುವುದನ್ನು ನಿಷೇಧಿಸಲಾಗಿದೆ. ಒಂದು ವೇಳೆ ನೋಂದಾಯಿಸಿದಲ್ಲಿ ಅಂತಹ ಅಭ್ಯರ್ಥಿಗಳ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು ಹಾಗೂ ಅಭ್ಯರ್ಥಿಯ ನೋಂದಣಿಯನ್ನು ರದ್ದುಪಡಿಸಿ ಪಾವತಿಸಿರುವ ಶುಲ್ಕವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.**
2. ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಳ್ಳಲು ಅರ್ಹರಲ್ಲದವರ ಅರ್ಜಿಯನ್ನು ಮಂಡಲಿಯು ತಿರಸ್ಕರಿಸಿದಲ್ಲಿ ಪಾವತಿಸಿರುವ ಶುಲ್ಕವನ್ನು ಹಿಂತಿರುಗಿಸಲಾಗುವುದಿಲ್ಲ. ಇದಕ್ಕೆ ಅಭ್ಯರ್ಥಿಗಳೇ ನೇರ ಜವಾಬ್ದಾರರಾಗುತ್ತಾರೆ ಮತ್ತು ಅವರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು.
3. **ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಳ್ಳುವಾಗ, ಸುತ್ತೋಲೆಯಲ್ಲಿ ನಿಗದಿಪಡಿಸಿರುವ ಸಂಯೋಜನೆಗಳನ್ನು ಮಾತ್ರ ಅಭ್ಯರ್ಥಿಗಳು ಆಯ್ಕೆ ಮಾಡಿಕೊಳ್ಳಬೇಕು.**

4. ಭರ್ತಿ ಮಾಡಿದ ಅರ್ಜಿಗಳನ್ನು ಮತ್ತು ಸಂಬಂಧಿಸಿದ ದಾಖಲೆಗಳನ್ನು ನಿಗದಿತ ದಿನಾಂಕದಂದು ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರು/ಸಿಬ್ಬಂದಿಯವರು ನೇರವಾಗಿ ಸಲ್ಲಿಸಬೇಕು ಹಾಗೂ ಸಲ್ಲಿಸಿದ ದಾಖಲೆಗಳಿಗೆ ಸ್ವೀಕೃತಿ ಪತ್ರ ಪಡೆಯುವುದು ಕಡ್ಡಾಯವಾಗಿರುತ್ತದೆ.
5. ಖಾಸಗಿ ಅಭ್ಯರ್ಥಿಗಳು ONLINE ನಲ್ಲಿ ಅರ್ಜಿ ಸಲ್ಲಿಸುವಾಗ ನಮೂದಿಸಿರುವ ಭಾಷೆ ಮತ್ತು ಐಚ್ಛಿಕ ವಿಷಯಗಳಲ್ಲಿ ಮಾತ್ರ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುತ್ತದೆ. ಆಯ್ಕೆ ಮಾಡಿಕೊಂಡ ನಂತರ ಯಾವುದೇ ಕಾರಣಕ್ಕೂ ಭಾಷೆ ಮತ್ತು ಐಚ್ಛಿಕ ವಿಷಯಗಳ ಬದಲಾವಣೆಗೆ ಅವಕಾಶ ಇರುವುದಿಲ್ಲ.

## III. ಖಾಸಗಿ ಅಭ್ಯರ್ಥಿಗಳಾಗಿ ನೋಂದಾಯಿಸಿಕೊಳ್ಳುವ ಸಂದರ್ಭದಲ್ಲಿ ಅಭ್ಯರ್ಥಿಯು ಅನುಸರಿಸಬೇಕಾದ ಕ್ರಮಗಳು:

**ಖಾಸಗಿ ಅಭ್ಯರ್ಥಿಗಳು ONLINE ನಲ್ಲಿ ಅರ್ಜಿ ಸಲ್ಲಿಸಲು ಮಂಡಲಿಯಿಂದ ನೀಡಿರುವ https://dpue-exam.karnataka.gov.in/test0app/REGPF ಲಿಂಕ್‌ಅನ್ನು ಬಳಸಿ ಅಥವಾ ಮಂಡಲಿಯ https://kseab.karnataka.gov.in ಅಂತರ್ಜಾಲದಲ್ಲಿ ಕೊಟ್ಟಿರುವ ಮೆನುವನ್ನು ಬಳಸಿ ಅರ್ಜಿ ಸಲ್ಲಿಸಬೇಕು.**

**ಅರ್ಜಿ ಸಲ್ಲಿಸುವ ಮುನ್ನ ಅಭ್ಯರ್ಥಿಗಳು ಈ ಕೆಳಕಂಡ ದಾಖಲೆಗಳನ್ನು ಸಿದ್ಧಪಡಿಸಿ ಇಟ್ಟುಕೊಳ್ಳಬೇಕು.**

ಅ. 10ನೇ ತರಗತಿ ತೇರ್ಗಡೆ ಹೊಂದಿದ ಅಂಕಪಟ್ಟಿ (ಎಸ್. ಎಸ್. ಎಲ್. ಸಿ/ 10TH PASS MARKS CARD)
ಆ. ಹಿಂದಿನ ವಿದ್ಯಾಸಂಸ್ಥೆಯಿಂದ ಪಡೆದ ವರ್ಗಾವಣೆ ಪತ್ರ (ಎಸ್. ಎಸ್. ಎಲ್. ಸಿ / 10TH STANDARD TC).
ಇ. ಆಧಾರ್ ಕಾರ್ಡ್ XEROX ಪ್ರತಿ.
ಈ. SCAN ಮಾಡಿ UPLOAD ಮಾಡಬೇಕಾಗಿರುವ ದಾಖಲೆಗಳು:
(I) ಭಾವಚಿತ್ರ (SIZE = 20 KB to 80 KB; FORMAT = JPG)
(II) ವರ್ಗಾವಣೆ ಪತ್ರ (SIZE = 200 KB to 1 MB; FORMAT = PDF)
(III) ಅಂಕಪಟ್ಟಿ (ONLY FOR OTHER BOARD CANDIDATES)
(IV) ಜಾತಿ ಪ್ರಮಾಣ ಪತ್ರ (SC/ ST/ C- 1 ವಿದ್ಯಾರ್ಥಿಗಳಿಗೆ ಮಾತ್ರ)
ಉ. ವಿಶೇಷಚೇತನ ಅಭ್ಯರ್ಥಿಗಳಾಗಿದ್ದಲ್ಲಿ **"ಜಿಲ್ಲಾ ಸರ್ಜನ್"** ರವರಿಂದ ದೃಢೀಕರಿಸಿದ ವೈದ್ಯಕೀಯ ಪ್ರಮಾಣಪತ್ರ ಅಥವಾ **UDID CARD** ನ XEROX ಪ್ರತಿ.

2. ಅಭ್ಯರ್ಥಿಯು ತಮ್ಮ ಮೊಬೈಲ್ ನಂಬರ್ ಉಪಯೋಗಿಸಿಕೊಂಡು ಮೊದಲು ಅರ್ಜಿ ಸಲ್ಲಿಸಲು USER ID ಮತ್ತು PASSWORD ಸೃಜನೆ ಮಾಡಿಕೊಳ್ಳಬೇಕು.
3. USER ID ಮತ್ತು PASSWORD ಉಪಯೋಗಿಸಿಕೊಂಡು LOGIN ಆಗಿ ನಂತರ ಅರ್ಜಿ ಸಲ್ಲಿಸುವುದು.
4. ಅಭ್ಯರ್ಥಿಯು ತಮಗೆ ನೀಡಿರುವ ಎಲ್ಲಾ ಸೂಚನೆಗಳನ್ನು ಓದಿಕೊಂಡು, ಒಪ್ಪಿಗೆ ನೀಡಿದ ನಂತರ ಅರ್ಜಿಯು ONLINE ನಲ್ಲಿ ತೆರೆದುಕೊಳ್ಳುತ್ತದೆ.
5. ಅಭ್ಯರ್ಥಿಯು 10ನೇ ತರಗತಿ (ಎಸ್.ಎಸ್.ಎಲ್.ಸಿ) ಯನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಯಿಂದ ಉತ್ತೀರ್ಣರಾಗಿದ್ದರೆ, SSLC BOARD ಅನ್ನು ಆಯ್ಕೆ ಮಾಡಿಕೊಳ್ಳಬೇಕು
6. ಎಸ್.ಎಸ್.ಎಲ್.ಸಿ ನೋಂದಣಿ ಸಂಖ್ಯೆಯನ್ನು ನಮೂದಿಸಿದರೆ ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿರುವ ಮಾಹಿತಿಯು ನೇರವಾಗಿ ಪ್ರಕಟವಾಗುತ್ತದೆ. ಉಳಿದ ಮಾಹಿತಿಯನ್ನು (ಮಾಧ್ಯಮ, ಭಾಷಾ ವಿಷಯಗಳು ಮತ್ತು ಸಂಯೋಜನೆಗಳನ್ನು) ಭರ್ತಿ ಮಾಡಿದ ನಂತರ ಸಂಬಂಧಿಸಿದ ದಾಖಲೆಗಳನ್ನು UPLOAD ಮಾಡಬೇಕು.
7. ಅಭ್ಯರ್ಥಿಯು 10ನೇ ತರಗತಿಯನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿಯನ್ನು ಹೊರತು ಪಡಿಸಿ ಬೇರೆ ಮಂಡಲಿಯಿಂದ ಉತ್ತೀರ್ಣರಾಗಿದ್ದರೆ, OTHER BOARD ಅನ್ನು ಆಯ್ಕೆ ಮಾಡಿಕೊಳ್ಳಬೇಕು ಮತ್ತು ಎಲ್ಲಾ ಮಾಹಿತಿಯನ್ನು ಭರ್ತಿ ಮಾಡಿದ ನಂತರ ಸಂಬಂಧಿಸಿದ ದಾಖಲೆಗಳನ್ನು UPLOAD ಮಾಡಬೇಕು.

8. ಎಲ್ಲಾ ಮಾಹಿತಿಗಳನ್ನು ಭರ್ತಿ ಮಾಡಿ SAVE BUTTON ಅನ್ನು CLICK ಮಾಡಬೇಕು. ನಂತರ ಕರಡು ಅರ್ಜಿಯನ್ನು (DRAFT APPLICATION) ಮುದ್ರಿಸಿಕೊಂಡು ಪರಿಶೀಲಿಸಿ, ಮಾಹಿತಿಯಲ್ಲಿ ತಪ್ಪಿದ್ದಲ್ಲಿ EDIT BUTTON ಅನ್ನು CLICK ಮಾಡಿ ತಪ್ಪಾಗಿ ನಮೂದಿಸಿರುವ ಮಾಹಿತಿಯನ್ನು ಸರಿಪಡಿಸಿ UPDATE BUTTON ಅನ್ನು CLICK ಮಾಡಬೇಕು.
9. ಭರ್ತಿ ಮಾಡಿದ ಎಲ್ಲಾ ಮಾಹಿತಿಗಳು ಸರಿಯಾಗಿವೆ ಎಂದು ಖಚಿತಪಡಿಸಿಕೊಂಡ ನಂತರ PAYMENT BUTTON ಅನ್ನು CLICK ಮಾಡಿ, ONLINE ಮೂಲಕ ಶುಲ್ಕವನ್ನು ಪಾವತಿಸಬೇಕು. ಶುಲ್ಕವನ್ನು ಪಾವತಿಸಿದ ನಂತರ ಅರ್ಜಿಯಲ್ಲಿರುವ ಯಾವುದೇ ಮಾಹಿತಿಯನ್ನು (ಮಾಧ್ಯಮ, ಭಾಷಾ ವಿಷಯಗಳು ಮತ್ತು ಸಂಯೋಜನೆಗಳನ್ನು) ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ.
10. ಶುಲ್ಕವನ್ನು ಪಾವತಿಸಿದ ನಂತರ ONLINE ನಲ್ಲಿ ಬರುವ ರಸೀತಿ, ಅಂತಿಮ ಅರ್ಜಿ ಮತ್ತು ಸ್ವೀಕೃತಿ (ACKNOWLEDGEMENT) ಅನ್ನು DOWNLOAD ಮಾಡಿ, ಮುದ್ರಿಸಿಕೊಂಡು ಪರೀಕ್ಷೆ ಮುಗಿಯುವವರೆಗೂ ಜೋಪಾನವಾಗಿ ಇಟ್ಟುಕೊಳ್ಳಬೇಕು. ಮಂಡಲಿಯಿಂದ ಪರಿಶೀಲನೆಗೆ ಕೇಳಿದಾಗ ಪ್ರಸ್ತುತ ಪಡಿಸಬೇಕು.
11. ಸ್ವೀಕೃತಿ (ACKNOWLEDGEMENT) ಯಲ್ಲಿ ನಮೂದಿಸಿರುವ ದಾಖಲೆಗಳು ಹಾಗೂ ಮುದ್ರಿತ ಅರ್ಜಿಯೊಂದಿಗೆ, ಮಂಡಲಿಯಿಂದ ಹಂಚಿಕೆ ಮಾಡಿದ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ನಿಗದಿತ ದಿನಾಂಕದೊಳಗೆ ಅಭ್ಯರ್ಥಿಯು ಭೇಟಿ ನೀಡಿ ಪ್ರಾಂಶುಪಾಲರಿಂದ ಮೂಲದಾಖಲೆಗಳ ಪರಿಶೀಲನೆ ಮಾಡಿಸಿ, ಸ್ವೀಕೃತಿಯಲ್ಲಿ ನಮೂದಿಸಿರುವ ದಾಖಲೆಗಳನ್ನು ಪ್ರಾಂಶುಪಾಲರಿಗೆ ಸಲ್ಲಿಸುವುದು.
12. ಮೂಲ ದಾಖಲೆಗಳ ಪರಿಶೀಲನೆ ಸಮಯದಲ್ಲಿ, ONLINE ಅರ್ಜಿಯಲ್ಲಿ ಭರ್ತಿ ಮಾಡಿದ ಮಾಹಿತಿಗಳು ತಪ್ಪೆಂದು ಕಂಡುಬಂದರೆ ಅರ್ಜಿಯನ್ನು ತಿರಸ್ಕರಿಲಾಗುವುದು ಮತ್ತು ಪಾವತಿಸಿರುವ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.
13. ಖಾಸಗಿ ಅಭ್ಯರ್ಥಿಗಳಾಗಿ ನೋಂದಾಯಿಸಿಕೊಂಡಿರುವ ಅರ್ಹ ಅಭ್ಯರ್ಥಿಗಳ ಪ್ರವೇಶ ಪತ್ರಗಳನ್ನು, ತಾವು ನೋಂದಾಯಿಸಿಕೊಂಡ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಂದ ಪಡೆಯುವುದು.
14. **2025-26ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ-1ಕ್ಕೆ ರೆಗ್ಯುಲರ್ ಅಥವಾ ರಿಪೀಟರ್ ಅಭ್ಯರ್ಥಿಗಳಾಗಿ ನೋಂದಾಯಿಸಿಕೊಂಡವರು, ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿ ಕೊಳ್ಳುವುದನ್ನು ನಿಷೇಧಿಸಲಾಗಿದೆ.** ಒಂದು ವೇಳೆ ನೋಂದಾಯಿಸಿಕೊಂಡಲ್ಲಿ ಅಂತಹ ಅಭ್ಯರ್ಥಿಗಳ ನೊಂದಣಿಯನ್ನು ರದ್ದುಗೊಳಿಸಿ, ಪಾವತಿಸಿರುವ ಶುಲ್ಕವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಹಾಗೂ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಿಲಾಗುವುದು.
15. ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಳ್ಳಲು ಅರ್ಹರಲ್ಲದ ಅರ್ಜಿಯನ್ನು ಮಂಡಲಿಯು ತಿರಸ್ಕರಿಸಿದಲ್ಲಿ ಪಾವತಿಸಿರುವ ಶುಲ್ಕವನ್ನು ಹಿಂತಿರುಗಿಸಲಾಗುವುದಿಲ್ಲ. ಇದಕ್ಕೆ ಅಭ್ಯರ್ಥಿಗಳೇ ನೇರ ಜವಾಬ್ದಾರರಾಗುತ್ತಾರೆ ಮತ್ತು ಅಂತಹವರ ವಿರುದ್ಧ ನಿಯಮಾನುಸಾರ ಶಿಸ್ತುಕ್ರಮ ತೆಗೆದು ಕೊಳ್ಳಲಾಗುವುದು.
16. ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಳ್ಳುವಾಗ, ಈ ಸುತ್ತೋಲೆಯಲ್ಲಿ ನಿಗದಿಪಡಿಸಿರುವ ಸಂಯೋಜನೆಗಳನ್ನು ಮಾತ್ರ ಅಭ್ಯರ್ಥಿಗಳು ಆಯ್ಕೆ ಮಾಡಿಕೊಳ್ಳಬೇಕು.
17. ಖಾಸಗಿ ಅಭ್ಯರ್ಥಿಗಳು ONLINE ನಲ್ಲಿ ಅರ್ಜಿ ಸಲ್ಲಿಸುವಾಗ ನಮೂದಿಸಿರುವ ಭಾಷಾ ಮತ್ತು ಐಚ್ಛಿಕ ವಿಷಯಗಳಲ್ಲಿ ಮಾತ್ರ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುತ್ತದೆ. ಆಯ್ಕೆ ಮಾಡಿಕೊಂಡ ನಂತರ ಯಾವುದೇ ಕಾರಣಕ್ಕೂ ಭಾಷಾ ಮತ್ತು ಐಚ್ಛಿಕ ವಿಷಯಗಳ ಬದಲಾವಣೆಗೆ ಅವಕಾಶ ಇರುವುದಿಲ್ಲ.

**19. ಭಾಷಾ ವಿನಾಯಿತಿ ಪಡೆಯುವ ಬಗ್ಗೆ: -**

a) ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಳ್ಳುವ ಅಭ್ಯರ್ಥಿಯು 10ನೇ ತರಗತಿಯಲ್ಲಿ ಭಾಷಾ ವಿನಾಯಿತಿಯನ್ನು ಪಡೆದಿದ್ದಲ್ಲಿ, ONLINE ನಲ್ಲಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಸದರಿ ಭಾಷಾ ವಿನಾಯಿತಿಯು ಸ್ವಯಂ ಚಾಲಿತವಾಗಿ ಪ್ರಕಟವಾಗುವುದು.

b) ಒಂದು ವೇಳೆ ONLINE ನಲ್ಲಿ ಸ್ವಯಂಚಾಲಿತವಾಗಿ ಪ್ರಕಟವಾಗದಿದ್ದಲ್ಲಿ, ಸಂಬಂಧಿಸಿದ ದಾಖಲೆಗಳಾದ **"ಜಿಲ್ಲಾ ಸರ್ಜನ್"** ರವರಿಂದ ದೃಢೀಕರಿಸಿದ ವೈದ್ಯಕೀಯ ಪ್ರಮಾಣಪತ್ರ ಅಥವಾ **UDID CARD** UPLOAD ಮಾಡುವುದು. ಸದರಿ ದಾಖಲೆಗಳನ್ನು ಜಂಟಿ ನಿರ್ದೇಶಕರು (ಪಿಯು ಪರೀಕ್ಷೆ), ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003 ರವರು ಪರಿಶೀಲಿಸಿ ಅರ್ಹ ಅಭ್ಯರ್ಥಿಗಳಿಗೆ, ಭಾಷಾ ವಿನಾಯಿತಿಯನ್ನು ನೀಡುವರು. ಸದರಿ ಮಾಹಿತಿಯನ್ನು ಅಭ್ಯರ್ಥಿಯ ನೋಂದಾಯಿತ ಮೊಬೈಲ್ ಸಂಖ್ಯೆಗೆ SMS ಮೂಲಕ ತಿಳಿಸಲಾಗುವುದು.

**ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಳ್ಳುವ ಸಮಯದಲ್ಲಿ ಅಭ್ಯರ್ಥಿಯು ONLINE ನಲ್ಲಿ ಪಾವತಿಸಬೇಕಾದ ಶುಲ್ಕದ ವಿವರ: -**

| ಕ್ರ. ಸಂ | ಶುಲ್ಕದ ವಿವರ | ಪ. ಜಾ/ ಪ. ಪಂ/ ಪ್ರವರ್ಗ-1 ರ ಅಭ್ಯರ್ಥಿಗಳನ್ನು ಹೊರತು ಪಡಿಸಿ ಉಳಿದ ಅಭ್ಯರ್ಥಿಗಳು ಪಾವತಿಸಬೇಕಾದ ಶುಲ್ಕ ರೂ. | ಪ. ಜಾ/ ಪ.ಪಂ/ ಪ್ರವರ್ಗ - 1 ರ ಅಭ್ಯರ್ಥಿಗಳು ಪಾವತಿಸಬೇಕಾದ ಶುಲ್ಕ ರೂ. |
|---|---|---|---|
| 1 | ನೋಂದಣಿ ಶುಲ್ಕ (Registration Fee) | 60-00 | 60-00 |
| 2 | ದಾಖಲಾತಿ ಶುಲ್ಕ (Admission Fee) | 400-00 | 400-00 |
| 3 | ಕಾಲೇಜು ಅಭಿವೃದ್ಧಿ ಶುಲ್ಕ | 1020-00 | 1020-00 |
| 4 | ಅಂಕಪಟ್ಟಿ ಶುಲ್ಕ | 80-00 | 80-00 |
| 5 | ಪರೀಕ್ಷಾ ಶುಲ್ಕ | 400-00 | Nil |
| | ಒಟ್ಟು ಮೊತ್ತ | **1960-00** | **1560-00** |

ನೋಂದಣಿ ಶುಲ್ಕ ಹಾಗೂ ಕಾಲೇಜು ಅಭಿವೃದ್ಧಿ ಶುಲ್ಕವನ್ನು ಮಂಡಲಿಯಿಂದ ನೇರವಾಗಿ ಕಾಲೇಜಿನ ಸರ್ಕಾರೇತರ ಬ್ಯಾಂಕ್ ಖಾತೆಗೆ (NON-GOVERNMENT BANK ACCOUNT) ಜಮಾ ಮಾಡಲಾಗುವುದು.

ನೋಂದಣಿ ಶುಲ್ಕವನ್ನು ಅಂಚೆ ವೆಚ್ಚ ಹಾಗೂ ಪರಿಶೀಲನಾ ವೆಚ್ಚಕ್ಕಾಗಿ ಪ್ರಾಂಶುಪಾಲರು ಮತ್ತು ಸಿಬ್ಬಂದಿಯವರು ಉಪಯೋಗಿಸುವುದು.

ಕಾಲೇಜು ಅಭಿವೃದ್ಧಿ ಶುಲ್ಕವನ್ನು ಕಾಲೇಜು ಸಂಚಿತ ನಿಧಿಗೆ ಜಮೆ ಮಾಡಿ ಮೂಲಭೂತ ಸೌಕರ್ಯಗಳಿಗಾಗಿ ಉಪಯೋಗಿಸಲು ಪ್ರಸ್ತಾವನೆಯನ್ನು ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಕಳುಹಿಸಿ ಇವರ ಅನುಮತಿ ಪಡೆಯಬೇಕು.

**ಶುಲ್ಕ ಪಾವತಿಸಲು ಹಾಗೂ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:**

| ಕ್ರ. ಸಂ. | ವಿವರ | ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಿ ಶುಲ್ಕ ಪಾವತಿಸಲು ಕಡೆಯ ದಿನಾಂಕ | ಪ್ರಾಂಶುಪಾಲರು ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಅನುಮೋದನೆ ಮಾಡಲು ಕೊನೆಯ ದಿನಾಂಕ | ಕಾಲೇಜಿನವರು ಅರ್ಜಿಗಳನ್ನು ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಸಲ್ಲಿಸುವ ದಿನಾಂಕ |
|---|---|---|---|---|
| 1 | ದಂಡ ಶುಲ್ಕವಿಲ್ಲದೆ | **30-10-2025** | **15-11-2025** | **17-11-2025** |
| 2 | ದಂಡ ಶುಲ್ಕದೊಂದಿಗೆ ರಜಾ ದಿನಗಳನ್ನು ಹೊರತುಪಡಿಸಿ ಪರೀಕ್ಷಾ ಶುಲ್ಕದ ಜೊತೆಗೆ ದಿನವೊಂದಕ್ಕೆ ರೂ. 50-00 ರಂತೆ ಗರಿಷ್ಠ ರೂ. 500-00 | **10-11-2025** | **25-11-2025** | **26-11-2025** |

**IV. ಅಭ್ಯರ್ಥಿಯು ಅರ್ಜಿಯ ಜೊತೆಗೆ ಕಾಲೇಜಿಗೆ ಸಲ್ಲಿಸಬೇಕಾಗಿರುವ ದಾಖಲೆಗಳು: -**

1) 10ನೇ ತರಗತಿ ತೇರ್ಗಡೆ ಹೊಂದಿದ ಮೂಲ ಅಂಕಪಟ್ಟಿ (ಎಸ್. ಎಸ್. ಎಲ್. ಸಿ/ 10TH PASS ORIGINAL MARKS CARD) ಹಾಗೂ ಎರಡು ದೃಢೀಕೃತ ನಕಲು ಪ್ರತಿಗಳು.
2) ಹಿಂದಿನ ವಿದ್ಯಾಸಂಸ್ಥೆಯಿಂದ ಪಡೆದ ಮೂಲ ವರ್ಗಾವಣೆ ಪತ್ರ (ಎಸ್. ಎಸ್. ಎಲ್. ಸಿ/ 10TH STANDARD ORIGINAL TC).
3) ದ್ವಿತೀಯ ಪಿಯುಸಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳು, ಪಿಯುಸಿ ಮೂಲ ವರ್ಗಾವಣೆ ಪತ್ರ ಮತ್ತು ದ್ವಿತೀಯ ಪಿಯುಸಿ ಮೂಲ ಅನುತ್ತೀರ್ಣ ಅಂಕಪಟ್ಟಿ/ಫಲಿತಾಂಶ ಪಟ್ಟಿ.
4) ಆಧಾರ್ ಕಾರ್ಡ್ ದೃಢೀಕೃತ XEROX ಪ್ರತಿ.
5) ವಿಶೇಷಚೇತನ ಅಭ್ಯರ್ಥಿಗಳಾಗಿದ್ದಲ್ಲಿ **"ಜಿಲ್ಲಾ ಸರ್ಜನ್"** ರವರಿಂದ ದೃಢೀಕರಿಸಿದ ವೈದ್ಯಕೀಯ ಪ್ರಮಾಣಪತ್ರ ಅಥವಾ **UDID CARD** ನ XEROX ಪ್ರತಿ.
6) ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಪ್ರವರ್ಗ-1ರ ಅಭ್ಯರ್ಥಿಗಳು **"ತಹಶೀಲ್ದಾರ್"** ರವರಿಂದ ಪಡೆದ ಜಾತಿ ಪ್ರಮಾಣ ಪತ್ರದ XEROX ಪ್ರತಿ.
7) ಅಭ್ಯರ್ಥಿಯ ಇತ್ತೀಚಿನ ಮೂರು ಪಾಸ್‌ಪೋರ್ಟ್ ಸೈಜಿನ ಭಾವಚಿತ್ರಗಳು (Photo). (ಪಾಸ್‌ಪೋರ್ಟ್ ಸೈಜಿನದಲ್ಲದ ಫೋಟೊಗಳನ್ನು ಸಲ್ಲಿಸಬಾರದು)

**V. ಪ್ರಾಂಶುಪಾಲರು ಖಾಸಗಿ ಅಭ್ಯರ್ಥಿಗಳ ಹೆಸರನ್ನು ನೋಂದಾಯಿಸಿಕೊಳ್ಳುವಾಗ ವಿಶೇಷವಾಗಿ ಗಮನಹರಿಸಬೇಕಾದ ಅಂಶಗಳು: -**

1) 2026ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ-1 ಕ್ಕೆ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಳ್ಳಲು ಅಭ್ಯರ್ಥಿಗಳು ONLINEನಲ್ಲಿ ಅರ್ಜಿ ಸಲ್ಲಿಸಿ ಸಂಬಂಧಿಸಿದ ಶುಲ್ಕವನ್ನು ಪಾವತಿಸಿರುತ್ತಾರೆ. **ಅದ್ದರಿಂದ ಕಾಲೇಜು ಹಂತದಲ್ಲಿ ಅಭ್ಯರ್ಥಿಗಳಿಂದ ಯಾವುದೇ ಶುಲ್ಕವನ್ನು ಪಡೆಯುವಂತಿಲ್ಲ.** ಈ ಬಗ್ಗೆ ಯಾವುದೇ ದೂರು ಬಂದಲ್ಲಿ ಸಂಬಂಧಿಸಿದ ಪ್ರಾಂಶುಪಾಲರ ವಿರುದ್ಧ ನಿಯಮಾನುಸಾರ ಶಿಸ್ತುಕ್ರಮ ಜರುಗಿಸಲಾಗುವುದು.
2) ಅಭ್ಯರ್ಥಿಗಳಿಂದ ONLINE ನಲ್ಲಿ ಸ್ವೀಕರಿಸಿದ ಅರ್ಜಿಗಳನ್ನು ಮಂಡಲಿಯಿಂದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಹಂಚಿಕೆ ಮಾಡಿ, ಸದರಿ ಅರ್ಜಿಗಳನ್ನು ಆಯಾ ಕಾಲೇಜಿನ ಪ್ರಾಂಶುಪಾಲರ KSEAB EXAM PORTAL LOGIN ನಲ್ಲಿ ಲಭ್ಯಗೊಳಿಸಲಾಗುತ್ತದೆ. ಮೂಲ ದಾಖಲೆಗಳ ಪರಿಶೀಲನೆಗೆ **ಮೊದಲು ಸ್ವೀಕೃತಿ ಪತ್ರದಲ್ಲಿ ಸದರಿ ಅಭ್ಯರ್ಥಿಯನ್ನು ತಮ್ಮ ಕಾಲೇಜಿಗೆ ಹಂಚಿಕೆ ಮಾಡಿರುವುದನ್ನು ಖಾತರಿ ಪಡಿಸಿಕೊಳ್ಳುವುದು.**

3) ತಮ್ಮ ಕಾಲೇಜಿಗೆ ಹಂಚಿಕೆಯಾದ ಖಾಸಗಿ ಅಭ್ಯರ್ಥಿಗಳು ಅಗತ್ಯ ದಾಖಲೆಗಳೊಂದಿಗೆ **ವೈಯಕ್ತಿಕವಾಗಿ** ಪ್ರಾಂಶುಪಾಲರನ್ನು ಸಂಪರ್ಕಿಸಿದಾಗ ಮೂಲ ದಾಖಲೆಗಳನ್ನು ONLINE ಅರ್ಜಿಯಲ್ಲಿ ಸಲ್ಲಿಸಿರುವ ಮಾಹಿತಿಯೊಂದಿಗೆ ಪರಿಶೀಲಿಸಿ ಸರಿ ಇದ್ದಲ್ಲಿ, ಪ್ರಾಂಶುಪಾಲರ KSEAB EXAM PORTAL LOGIN ನಲ್ಲಿ ಅರ್ಜಿಯನ್ನು ಅನುಮೋದಿಸುವುದು. ಅಭ್ಯರ್ಥಿಯು ಒದಗಿಸಿದ ಮಾಹಿತಿ ತಪ್ಪಿದ್ದಲ್ಲಿ ಅಥವಾ ಮೂಲ ದಾಖಲೆಗಳನ್ನು ಸಲ್ಲಿಸದಿದ್ದಲ್ಲಿ, ಪ್ರಾಂಶುಪಾಲರು KSEAB EXAM PORTAL LOGIN ನಲ್ಲಿರುವ ಅರ್ಜಿಯನ್ನು ಸೂಕ್ತ ಕಾರಣ ನೀಡಿ ನಿಗದಿತ ದಿನಾಂಕದೊಳಗೆ ತಿರಸ್ಕರಿಸುವುದು.

4) ಶಾಲಾ ಶಿಕ್ಷಣ ಇಲಾಖೆಯ (ಪದವಿ ಪೂರ್ವ) ದಾಖಲಾತಿ ಮಾರ್ಗಸೂಚಿ ಪಟ್ಟಿಯಲ್ಲಿರುವ ಸೆಕೆಂಡರಿ ಎಜುಕೇಷನ್ ಬೋರ್ಡ್‌ಗಳಿಂದ 2025 ರ ಆಗಸ್ಟ್ ಅಥವಾ ಅದಕ್ಕೂ ಹಿಂದಿನ ಸಾಲಿನ ಪರೀಕ್ಷೆಗಳಲ್ಲಿ 10ನೇ ತರಗತಿಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಎಂಬುದನ್ನು ಪರಿಶೀಲಿಸುವುದು.

5) ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು **ಅನುತ್ತೀರ್ಣರಾಗಿರುವ ಸಂಯೋಜನೆ ಹೊರತುಪಡಿಸಿ**, ಕಲಾ ಅಥವಾ ವಾಣಿಜ್ಯ ವಿಭಾಗದ ಬೇರೆ ಸಂಯೋಜನೆಯಲ್ಲಿ ನೋಂದಾಯಿಸಿಕೊಂಡಿರುವ ಬಗ್ಗೆ ಪರಿಶೀಲಿಸುವುದು.

6) **2025-26ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ-1ಕ್ಕೆ ರೆಗ್ಯುಲರ್ ಅಥವಾ ರಿಪೀಟರ್ ಅಭ್ಯರ್ಥಿಗಳಾಗಿ ನೋಂದಾಯಿಸಿಕೊಂಡವರು ಖಾಸಗಿ ಅಭ್ಯರ್ಥಿಗಳಾಗಿ ನೋಂದಾಯಿಸಿ ಕೊಳ್ಳುವುದನ್ನು ನಿಷೇಧಿಸಲಾಗಿದೆ. ಅದ್ದರಿಂದ ಪರಿಶೀಲನೆ ವೇಳೆ ಅಂತಹ ವಿದ್ಯಾರ್ಥಿಗಳು ಕಂಡುಬಂದಲ್ಲಿ** ಪ್ರಾಂಶುಪಾಲರು KSEAB EXAM PORTAL LOGIN ನಲ್ಲಿ ಅರ್ಜಿಯನ್ನು ತಿರಸ್ಕರಿಸುವುದು.

7) ಅಭ್ಯರ್ಥಿಯು ಕಾಲೇಜಿಗೆ ವೈಯಕ್ತಿಕವಾಗಿ ಅರ್ಜಿ ಸಲ್ಲಿಕೆಯಾದ ಹದಿನೈದು (15) ಕಾರ್ಯನಿರತ ದಿನಗಳಲ್ಲಿ ದಾಖಲೆಗಳನ್ನು ಪರಿಶೀಲನೆಗೆ ಸಲ್ಲಿಸದಿದ್ದಲ್ಲಿ, ಅಂತಹ ಅರ್ಜಿಗಳನ್ನು ಪ್ರಾಂಶುಪಾಲರು KSEAB EXAM PORTAL LOGIN ನಲ್ಲಿ 'CANDIDATE DONOT TURNED WITHIN THE TIME LINE GIVEN BY KSEAB' ಎಂದು ನಮೂದಿಸಿ ಅರ್ಜಿಯನ್ನು ತಿರಸ್ಕರಿಸುವುದು.

8) ಖಾಸಗಿ ಅಭ್ಯರ್ಥಿಗಳ ಆಧಾರ್ ಕಾರ್ಡ್‌ನ ದೃಢೀಕೃತ ಪ್ರತಿಯನ್ನು ಕಡ್ಡಾಯವಾಗಿ ಪರಿಶೀಲಿಸುವುದು.

9) ದ್ವಿಪ್ರತಿ ವರ್ಗಾವಣೆ ಪತ್ರದ ಆಧಾರದ ಮೇಲೆ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಳ್ಳಲು ಬಂದಾಗ ಪ್ರಾಂಶುಪಾಲರು ತಮ್ಮ ಹಂತದಲ್ಲಿಯೇ ಪರಿಶೀಲಿಸಿ 100-00 ರೂಗಳ ಛಾಪಾ ಕಾಗದದಲ್ಲಿ ಮಂಡಲಿಯಿಂದ ಒದಗಿಸಿರುವ ನಿಗದಿತ ನಮೂನೆಯಲ್ಲಿ ಅಭ್ಯರ್ಥಿಯಿಂದ ದೃಢೀಕರಣ ಪಡೆಯುವುದು. (ದೃಢೀಕರಣ ಪತ್ರದ ಮಾದರಿಯನ್ನು ಸುತ್ತೋಲೆಯೊಂದಿಗೆ ಲಗತ್ತಿಸಿದೆ).

10) **ಖಾಸಗಿ ಅಭ್ಯರ್ಥಿಗಳಿಗಾಗಿಯೇ ಪ್ರತ್ಯೇಕ ದಾಖಲಾತಿ ವಹಿಯನ್ನು (Admission Register) ತೆರೆಯುವುದು. ಈಗಾಗಲೇ ಹಿಂದಿನ ವರ್ಷಗಳಲ್ಲಿ ದಾಖಲಾತಿ ವಹಿಯನ್ನು ತೆರೆದಿದ್ದಲ್ಲಿ, ಅದರಲ್ಲಿಯೇ ಮುಂದುವರಿಸುವುದು ಹಾಗೂ ರೆಗ್ಯುಲರ್ ವಿದ್ಯಾರ್ಥಿಗಳ ರೀತಿ ಎಲ್ಲಾ ವಿವರಗಳನ್ನು ದಾಖಲಿಸುವುದು. ಭಾವಚಿತ್ರವನ್ನು ದಾಖಲಾತಿ ಪುಸ್ತಕದಲ್ಲಿ ಅಂಟಿಸಿ ಅಭ್ಯರ್ಥಿಯ ಸಹಿ ಪಡೆಯುವುದು.**

11) ನೋಂದಣಿ ಸಮಯದಲ್ಲಿ ಅಭ್ಯರ್ಥಿಗಳಿಂದ ಪಡೆಯುವ ಮೂಲ ಅಂಕಪಟ್ಟಿ, ವರ್ಗಾವಣೆ ಪತ್ರ ಹಾಗೂ ಇನ್ನಿತರೆ ದಾಖಲೆಗಳನ್ನು ಕಾಲೇಜಿನಲ್ಲಿಯೇ ಕಾಯ್ದಿರಿಸುವುದು. ಎಸ್.ಎಸ್.ಎಲ್.ಸಿ./10ನೇ ತರಗತಿ ಮೂಲ ಉತ್ತೀರ್ಣ ಅಂಕಪಟ್ಟಿಯನ್ನು ಮಾತ್ರ ಪ್ರವೇಶ ಪತ್ರ ವಿತರಿಸಿದ ನಂತರ ಅಭ್ಯರ್ಥಿಗಳಿಗೆ ಹಿಂತಿರುಗಿಸುವುದು.

**12) ಕರೆಸ್ಪಾಂಡೆನ್ಸ್ ಕಾಲೇಜುಗಳು ಎಂಬ ಹೆಸರಿನೊಂದಿಗೆ ವ್ಯವಹರಿಸುವ ಅಥವಾ ಯಾರೇ ಮಧ್ಯವರ್ತಿಗಳ ಮೂಲಕ ಬರುವ ಅರ್ಜಿಗಳನ್ನು ಮಾನ್ಯ ಮಾಡದೇ ಅವುಗಳನ್ನು ತಿರಸ್ಕರಿಸುವುದು. ಪ್ರತಿ ಅಭ್ಯರ್ಥಿಯು ವೈಯಕ್ತಿಕವಾಗಿ ONLINE ಅರ್ಜಿ ಸಲ್ಲಿಸಿ, ಅಗತ್ಯ ದಾಖಲೆಗಳೊಂದಿಗೆ ನೋಂದಾಯಿಸಿಕೊಳ್ಳಲು ಬಂದಲ್ಲಿ ಮಾತ್ರ ಮಾನ್ಯ ಮಾಡುವುದು.**

**ಅಭ್ಯರ್ಥಿಯ ಪರವಾಗಿ ಮತ್ತೊಬ್ಬರು ONLINE ಅರ್ಜಿ ಸಲ್ಲಿಸಿ ಅಗತ್ಯ ದಾಖಲೆಗಳೊಂದಿಗೆ ನೋಂದಾಯಿಸಿಕೊಳ್ಳಲು ಬಂದಲ್ಲಿ ಅಂತಹ ಅರ್ಜಿಯನ್ನು ಮಾನ್ಯ ಮಾಡಲು ಅವಕಾಶ ಇರುವುದಿಲ್ಲ. ಮಧ್ಯವರ್ತಿಗಳ ಮೂಲಕ ಬರುವ ಅರ್ಜಿಗಳನ್ನು ಮಾನ್ಯ ಮಾಡುವ ಪ್ರಾಂಶುಪಾಲರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.**

13) ಅಭ್ಯರ್ಥಿಗಳಿಂದ ಮೂಲ ದಾಖಲೆಗಳನ್ನು ಪಡೆಯುವುದರ ಜೊತೆಗೆ, ಅವುಗಳ ಎರಡು ಜೆರಾಕ್ಸ್ ಪ್ರತಿಗಳನ್ನು ಪಡೆದು ಅವುಗಳನ್ನು ಮೂಲ ಪ್ರತಿಗಳೊಂದಿಗೆ ಪರಿಶೀಲಿಸಿ, ದೃಢೀಕರಿಸಿ ಒಂದು ಸೆಟ್ ಜೆರಾಕ್ಸ್ ಪ್ರತಿಗಳನ್ನು ONLINE ಅರ್ಜಿಯೊಡನೆ ಪ್ರತ್ಯೇಕವಾಗಿ ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಸಲ್ಲಿಸಬೇಕು. ಉಳಿದ ಒಂದು ಮೂಲ ಹಾಗೂ ಒಂದು ಜರಾಕ್ಸ್ ಪ್ರತಿಗಳನ್ನು ಕಾಲೇಜಿನಲ್ಲಿಯೇ ಇಟ್ಟುಕೊಳ್ಳುವುದು ಹಾಗೂ ಪರಿಶೀಲನೆಯ ಸಂದರ್ಭದಲ್ಲಿ ಸಲ್ಲಿಸುವುದು.

14) ಕಾಲೇಜಿನ ಇಬ್ಬರು ಉಪನ್ಯಾಸಕರು, ದಾಖಲೆಗಳ ಆಧಾರದ ಮೇಲೆ ಅರ್ಜಿಯಲ್ಲಿರುವ ಅಭ್ಯರ್ಥಿಗಳ ಮಾಹಿತಿಯನ್ನು ಪರಿಶೀಲಿಸುವುದು. ಈ ಸಂಬಂಧ ಅನುಬಂಧದಲ್ಲಿ ನೀಡಿರುವಂತೆ ದಸ್ತಾವೇಜನ್ನು ಪ್ರತಿ ಅಭ್ಯರ್ಥಿಗೆ ದ್ವಿಪ್ರತಿಯಲ್ಲಿ ಸಿದ್ಧಪಡಿಸಿ, ಒಂದು ಪ್ರತಿಯನ್ನು ಇತರೆ ದಾಖಲೆಗಳೊಂದಿಗೆ ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಸಲ್ಲಿಸುವುದು.

15) ಎಸ್.ಎಸ್.ಎಲ್.ಸಿ. ಮೂಲ ಪ್ರಮಾಣ ಪತ್ರಗಳನ್ನು ಪರಿಶೀಲಿಸುವ ಜವಾಬ್ದಾರಿಯನ್ನು ಕಾಲೇಜಿನ ಹಂತಕ್ಕೆ ನಿಗದಿಗೊಳಿಸಿರುವುದರಿಂದ ಕಾಲೇಜಿನ ಪ್ರಾಂಶುಪಾಲರು ಮೂಲ ಪ್ರಮಾಣ ಪತ್ರಗಳನ್ನು ಖುದ್ದಾಗಿ ಪರಿಶೀಲಿಸಿ ನೈಜತೆಯನ್ನು ಖಚಿತಪಡಿಸಿಕೊಂಡು, ನಂತರ ತಮ್ಮ ಲಾಗಿನ್‌ನಲ್ಲಿ ಅಭ್ಯರ್ಥಿಯ ಅರ್ಜಿಯನ್ನು ಅನುಮೋದಿಸುವುದು.

16) ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಯಿಂದ ಹಾಗೂ ಜಿಲ್ಲಾ ಉಪನಿರ್ದೇಶಕರ ಕಛೇರಿಯಿಂದ ಅಧಿಕಾರಿಗಳು ತಪಾಸಣೆ ಮಾಡಲು ಬಂದಾಗ ಪರಿಶೀಲನೆಗಾಗಿ ONLINE ಅರ್ಜಿಗಳ ಮುದ್ರಿತ ಪ್ರತಿಗಳು ಹಾಗೂ ಸಂಬಂಧಿಸಿದ ದಾಖಲೆಗಳನ್ನು ಒದಗಿಸುವುದು.

## VI. ಅರ್ಜಿ ನಮೂನೆಗಳೊಂದಿಗೆ ಪ್ರಾಂಶುಪಾಲರು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು (ಪದವಿ ಪೂರ್ವ) ರವರ ಕಛೇರಿಗೆ ಸಲ್ಲಿಸಬೇಕಾಗಿರುವ ದಾಖಲೆಗಳು: -

1) ಅಭ್ಯರ್ಥಿಗಳಿಂದ ಸ್ವೀಕರಿಸಿದ ಮುದ್ರಿತ ಅರ್ಜಿ ನಮೂನೆ.
2) ಎಲ್ಲಾ ವಿವರಗಳನ್ನೊಳಗೊಂಡ ಚೆಕ್‌ಲಿಸ್ಟ್ (ಪ್ರಾಂಶುಪಾಲರ ಲಾಗಿನ್‌ನಿಂದ ಮುದ್ರಿಸಿದ ಪ್ರತಿ),
3) 10ನೇ ತರಗತಿಯ ಉತ್ತೀರ್ಣ ಪ್ರಮಾಣ ಪತ್ರದ ದೃಢೀಕೃತ ಜೆರಾಕ್ಸ್ ಪ್ರತಿ,
4) ವರ್ಗಾವಣೆ ಪತ್ರದ ದೃಢೀಕೃತ ಜೆರಾಕ್ಸ್ ಪ್ರತಿ,
5) ಶುಲ್ಕ ಪಾವತಿಸಿರುವ ಮೂಲ ಚಲನ್ ಹಾಗೂ
6) ಆಧಾರ್ ಕಾರ್ಡ್‌ನ ದೃಢೀಕೃತ ಪ್ರತಿ.
7) ದ್ವಿಪ್ರತಿ ವರ್ಗಾವಣೆ ಪತ್ರದ ಆಧಾರದ ಮೇಲೆ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಳ್ಳಲು ಬಂದಾಗ ಪ್ರಾಂಶುಪಾಲರು ತಮ್ಮ ಹಂತದಲ್ಲಿಯೇ ಪರಿಶೀಲಿಸಿದ 100 ರೂಗಳ ಛಾಪಾ ಕಾಗದದಲ್ಲಿ ಮಂಡಲಿಯಿಂದ ಒದಗಿಸಿರುವ ನಿಗದಿತ ನಮೂನೆಯಲ್ಲಿ ಅಭ್ಯರ್ಥಿಯಿಂದ ಪಡೆದ ಮುಚ್ಚಳಿಕೆ ಪತ್ರ.

   ಈ ಮೇಲಿನ ದಾಖಲೆಗಳನ್ನು ತಿಳಿಸಿರುವ ಕ್ರಮದಲ್ಲಿ ಲಕೋಟೆಗಳಲ್ಲಿ ಹಾಕುವುದು. ಒಂದು ಲಕೋಟೆಯಲ್ಲಿ ಗರಿಷ್ಠ 25 ಅರ್ಜಿಗಳನ್ನು ಮಾತ್ರ ತುಂಬಿಸುವುದು ಹಾಗೂ ಪ್ರತಿಯೊಂದು ಲಕೋಟೆಯ ಮೇಲೆ ಲಕೋಟೆ ಸಂಖ್ಯೆಯನ್ನು ನಮೂದಿಸುವುದು (ಉದಾ: 3 ಲಕೋಟೆಗಳು ಇದ್ದಲ್ಲಿ 1/3, 2/3, 3/3....) ಲಕೋಟೆಗಳ ಮೇಲೆ ಅರ್ಜಿಗಳ ಒಟ್ಟು ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸುವುದು.

8) ಅಭ್ಯರ್ಥಿಗಳಿಂದ ಪಡೆದ ಇನ್ನುಳಿದ ದಾಖಲೆಗಳನ್ನು ಕಾಲೇಜಿನಲ್ಲಿಯೇ ಕಾಯ್ದಿರಿಸುವುದು.

9) ಅರ್ಜಿ ನಮೂನೆಗಳು ಹಾಗೂ ಮೇಲೆ ತಿಳಿಸಿರುವ ದಾಖಲೆಗಳನ್ನು ಬಂಡಲ್ ಮಾಡಿ ಲಕೋಟೆಯ ಮೇಲೆ ಕಾಲೇಜಿನ ಸಂಕೇತ ಸಂಖ್ಯೆ ಮತ್ತು ವಿಳಾಸದೊಂದಿಗೆ **"ಖಾಸಗಿ ಅಭ್ಯರ್ಥಿಗಳ ಅರ್ಜಿಗಳು" (ದಂಡಶುಲ್ಕ ರಹಿತ)** ಎಂದು ನಮೂದಿಸಿ **ದಿನಾಂಕ: 17-11-2025 ರಂದು** ಮತ್ತು ದಂಡ ಶುಲ್ಕ ಸಹಿತ ಅರ್ಜಿಗಳನ್ನು **ದಿನಾಂಕ: 26-11-2025 ರಂದು** ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಸಲ್ಲಿಸುವುದು.

**10) ಜಿಲ್ಲಾ ಉಪನಿರ್ದೇಶಕರು ಪ್ರಾಂಶುಪಾಲರಿಂದ ಸ್ವೀಕರಿಸಿದ "ಖಾಸಗಿ ಅಭ್ಯರ್ಥಿಗಳ ಅರ್ಜಿಗಳನ್ನು" ಪರಿಶೀಲಿಸಿ ತಮ್ಮ ಕಛೇರಿಯಲ್ಲಿಯೇ ಕಾಯ್ದಿರಿಸುವುದು ಹಾಗೂ ಅವಶ್ಯಕತೆ ಇದ್ದಲ್ಲಿ ಮಾತ್ರ ಮಂಡಲಿಯ ಪರಿಶೀಲನೆಗೆ ಸಲ್ಲಿಸಬೇಕು.**

**ಅಧ್ಯಕ್ಷರು,**
**ಕ. ಶಾ. ಪ & ಮೌ. ನಿ. ಮಂಡಲಿ.**

**ಸೂಕ್ತ ಕ್ರಮಕ್ಕಾಗಿ: -**

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರುಗಳು, ಶಾಲಾ ಶಿಕ್ಷಣ ಇಲಾಖೆ, (ಪದವಿ ಪೂರ್ವ) ರವರಿಗೆ **(ಒಂದು ಪ್ರತಿಯನ್ನು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸುವುದು)**
2. ರಾಜ್ಯದ ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ. **(ಒಂದು ಪ್ರತಿಯನ್ನು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸುವುದು)**
3. ಹಿರಿಯ ಸಹಾಯಕ ನಿರ್ದೇಶಕರು, ಗಣಕ ಶಾಖೆ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, ಇವರಿಗೆ **(ಮಂಡಲಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ).**

**ಪ್ರತಿಯನ್ನು: -**

1. ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, (ಪದವಿ ಪೂರ್ವ) 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-12 ರವರಿಗೆ.
2. ನಿರ್ದೇಶಕರು, (ಪರೀಕ್ಷೆಗಳು) ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3 ರವರಿಗೆ.
3. ಜಂಟಿ ನಿರ್ದೇಶಕರು (ಪಿ. ಯು ಪರೀಕ್ಷೆ) ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3 ರವರಿಗೆ.
4. ಉಪನಿರ್ದೇಶಕರು, (ಪಿ. ಯು ಪರೀಕ್ಷೆ) ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3 ರವರಿಗೆ.
5. ಹೆಚ್ಚುವರಿ/ಕಛೇರಿ ಪ್ರತಿ.

## ದ್ವಿಪ್ರತಿ ವರ್ಗಾವಣೆ ಪ್ರಮಾಣ ಪತ್ರ ಆಧಾರದ ಮೇಲೆ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಲು ಸಲ್ಲಿಸಬೇಕಾದ ಅಫಿಡವಿಟ್ ಮಾಹಿತಿ

1. ........................................... ಆದ ನಾನು ...................................................................... ಶಾಲೆಯಲ್ಲಿ 10ನೇ ತರಗತಿ ವ್ಯಾಸಂಗ ಮಾಡಿ ಉತ್ತೀರ್ಣನಾಗಿದ್ದು, ಸದರಿ ಪ್ರೌಢಶಾಲೆಯಿಂದ ನನ್ನ ಮೂಲ ವರ್ಗಾವಣೆ ಪ್ರಮಾಣ ಪತ್ರವನ್ನು ಮತ್ತು ಅಂಕಪಟ್ಟಿಯನ್ನು ಪಡೆದುಕೊಂಡಿರುತ್ತೇನೆ.
2. ನಾನು 10ನೇ ತರಗತಿ ಉತ್ತೀರ್ಣಗೊಂಡ ನಂತರ ಎಸ್‌ಎಸ್‌ಎಲ್‌ಸಿ ಮೂಲ ವರ್ಗಾವಣೆ ಪತ್ರವನ್ನು ನೀಡಿ ಎಲ್ಲಿಯೂ ಯಾವ ಕೋರ್ಸಿಗೂ ಸಹ ದಾಖಲಾತಿ ಹೊಂದಿರುವುದಿಲ್ಲ.
3. ನನ್ನ ಮೂಲ ವರ್ಗಾವಣೆ ಪತ್ರವು ................................ರಲ್ಲಿ ಕಳೆದು ಹೋಗಿದ್ದು, ಈ ಹಿನ್ನೆಲೆಯಲ್ಲಿ ನಮ್ಮ ವ್ಯಾಪ್ತಿಗೆ ಬರುವಂತಹ ಪೋಲಿಸ್ ಠಾಣೆಗೆ ದಿನಾಂಕ.................ರಂದು FIR ದಾಖಲಿಸಿರುತ್ತೇನೆ. FIR ಸಂಖ್ಯೆ .....................ಇದಾಗಿರುತ್ತದೆ.
4. ನನ್ನ ಮೂಲ ವರ್ಗಾವಣೆ ಪತ್ರವು ಸಿಕ್ಕಿದ್ದೇ ಆದಲ್ಲಿ ಅದನ್ನು ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರಿಗೆ ವಾಪಸ್ ಮಾಡುತ್ತೇನೆ.
5. ನಾನು ವ್ಯಾಸಂಗ ಮಾಡಿದ ಶಾಲೆಯಲ್ಲಿ ಮೊದಲು ಮೂಲ ವರ್ಗಾವಣೆ ಪತ್ರವನ್ನು ದಿನಾಂಕ: ............... ರಲ್ಲಿ ಪಡೆದಿರುತ್ತೇನೆ. ತದನಂತರ ಅದು ಕಳೆದುಹೋದ ನಂತರ ದ್ವಿಪ್ರತಿ ಮೂಲ ವರ್ಗಾವಣೆ ಪತ್ರವನ್ನು ದಿನಾಂಕ: .......................... ರಂದು ಪಡೆದುಕೊಂಡಿರುತ್ತೇನೆ.
6. ವರ್ಗಾವಣೆ ಪ್ರಮಾಣ ಪತ್ರ ದುರ್ಬಳಕೆ ಮಾಡಿರುವುದು ಸಾಬೀತಾದಲ್ಲಿ ಬೇರೆ ಯಾವುದಾದರೂ ಶೈಕ್ಷಣಿಕ ಸಂಸ್ಥೆಗಳಲ್ಲಿ ಬಳಕೆ ಮಾಡಿರುವುದು ಮುಂದಿನ ದಿನಗಳಲ್ಲಿ ಕಂಡುಬಂದಲ್ಲಿ ನನ್ನ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಬಹುದಾಗಿದೆ ಎಂಬ ಮಾಹಿತಿಯು ನನ್ನ ಗಮನದಲ್ಲಿದೆ ಎಂದು ನಾನು ಪ್ರಮಾಣ ಮಾಡುತ್ತೇನೆ.
7. ನಾನು ನೀಡಿದ ಮಾಹಿತಿಗಳು ಎಲ್ಲಾ ಸರಿ ಇರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ. ಇದರಲ್ಲಿ ಯಾವುದೇ ಮಾಹಿತಿ ಸುಳ್ಳು ಎಂದು ರುಜುವಾತಾದಲ್ಲಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ ನೀಡುವ ಕ್ರಮಕ್ಕೆ ನಾನು ಬದ್ಧನಾಗಿರುತ್ತೇನೆ ಹಾಗೂ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿದ ಅರ್ಜಿಯನ್ನು ಮಂಡಲಿಯು ರದ್ದುಪಡಿಸಿದಲ್ಲಿ ಅದಕ್ಕೆ ಸ್ವತಃ ನಾನೇ ಜವಾಬ್ದಾರನಾಗಿರುತ್ತೇನೆ.

ವಿದ್ಯಾರ್ಥಿಯ ಸಹಿ

ಪೋಷಕರ ಸಹಿ

**ದೃಢೀಕರಿಸಿದೆ**

ಪ್ರಾಂಶುಪಾಲರ ಸಹಿ ಮೊಹರಿನೊಂದಿಗೆ

# ಅನುಬಂಧ

## 2026ರ ದ್ವಿತೀಯ ಪಿಯುಸಿ ಪರೀಕ್ಷೆ-1ಕ್ಕೆ ಖಾಸಗಿ ಅಭ್ಯರ್ಥಿಗಳ ಮಾಹಿತಿ ಒದಗಿಸುವ ನಮೂನೆ

| ಕ್ರ. ಸಂ | ಅಭ್ಯರ್ಥಿಯ ಹೆಸರು | ತಂದೆಯ ಹೆಸರು | ಎಸ್.ಎಸ್.ಎಲ್.ಸಿ. / 10ನೇ ತರಗತಿ ಪರೀಕ್ಷಾ ನೋಂದಣಿ ಸಂಖ್ಯೆ | ತೇರ್ಗಡೆಯಾದ ವರ್ಷ ಮತ್ತು ತಿಂಗಳು | ಎಸ್. ಎಸ್.ಎಲ್.ಸಿ. / 10ನೇ ತರಗತಿ / ಪಿಯುಸಿ ಓದಿದ ಶಾಲಾ/ ಕಾಲೇಜಿನ ಹೆಸರು ಮತ್ತು ವಿಳಾಸ |
|---|---|---|---|---|---|
| | | | | | |
| | | | | | |
| | | | | | |
| | | | | | |
| | | | | | |

ಅಭ್ಯರ್ಥಿಗಳು 10ನೇ ತರಗತಿ/ ಪ್ರಥಮ ಪಿಯುಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ/ ಪ್ರಥಮ/ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದಾರೆ.

10ನೇ ತರಗತಿ ಮೂಲ ಅಂಕಪಟ್ಟಿ/ ಜನ್ಮ ದಿನಾಂಕ ದೃಢೀಕರಣಕ್ಕಾಗಿ ಪಡೆದ ಮೂಲ ದಾಖಲೆಗಳನ್ನು ಕಾಲೇಜಿನಲ್ಲಿ ಉಳಿಸಿಕೊಂಡು, ಇವುಗಳ ದೃಢೀಕೃತ ಫೋಟೋ ಪ್ರತಿಗಳನ್ನು ಇದರೊಂದಿಗೆ ಕಳುಹಿಸಲಾಗಿದೆ.

ಅಭ್ಯರ್ಥಿಗಳು ಸಲ್ಲಿಸಿರುವ ದಾಖಲೆಗಳನ್ನು ನಾನು ಖುದ್ದಾಗಿ ಪರಿಶೀಲಿಸಿ ಎಲ್ಲಾ ದಾಖಲೆಗಳು ಅಸಲಿಯಾಗಿವೆ ಹಾಗೂ ಒದಗಿಸಿರುವ ಮಾಹಿತಿಗಳು ಮಂಡಲಿಯ ಅಧಿಸೂಚನೆಯ ಪ್ರಕಾರ ಸರಿಯಾಗಿವೆ ಎಂಬುದನ್ನು ಖಚಿತಪಡಿಸಿಕೊಂಡು, ಇವರು 2026 ರ ದ್ವಿತೀಯ ಪಿಯುಸಿ ಪರೀಕ್ಷೆ-1 ಕ್ಕೆ ಖಾಸಗಿ ಅಭ್ಯರ್ಥಿಯಾಗಿ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಿದ್ದಾರೆ ಎಂಬುದಾಗಿ ದೃಢೀಕರಿಸಿರುತ್ತೇನೆ. ನಮ್ಮ ಕಾಲೇಜಿನ ಇಬ್ಬರು ಹಿರಿಯ ಉಪನ್ಯಾಸಕರು ಈ ದಾಖಲೆಗಳನ್ನು ಪರಿಶೀಲಿಸಿದ್ದಾರೆ.

### <u>ದಾಖಲೆಗಳನ್ನು ಪರಿಶೀಲಿಸಿದ ಉಪನ್ಯಾಸಕರ ಹೆಸರು ಮತ್ತು ಸಹಿ:</u>

| ಕ್ರ. ಸಂ | ಹೆಸರು | ಸಹಿ |
|---|---|---|
| 01 | | |
| 02 | | |

ಸ್ಥಳ: ಪ್ರಾಚಾರ್ಯರ ಸಹಿ

ದಿನಾಂಕ: ಕಾಲೇಜಿನ ಮೊಹರು

**ಅಡಕಗಳು: -**

1. ಅಭ್ಯರ್ಥಿಯ ಮುದ್ರಿತ ಅರ್ಜಿ.
2. 10ನೇ ತರಗತಿ ಪಾಸಾದ ದೃಢೀಕೃತ ಅಂಕಪಟ್ಟಿ/ಪ್ರಮಾಣ ಪತ್ರ.
3. ಮೂಲ ವರ್ಗಾವಣೆ ಪತ್ರದ ದೃಢೀಕೃತ ಪ್ರತಿ.
4. ದೃಢೀಕೃತ ಆಧಾರ್ ಕಾರ್ಡ್‌ನ ಪ್ರತಿ.

1. ಶುಲ್ಕ ಪಾವತಿಸಿರುವ ಮೂಲ ಚಲನ್.